# ಶ್ರೀ ಗಣೇಶ ಪೂಜಾವಿಧಿ

## (ಕೆಲವು ಮಂತ್ರಗಳ ಅರ್ಥಸಹಿತ)

### ಮನೋಗತ

ಯಾವುದೇ ದೇವತೆಯ ಪೂಜೆಯಲ್ಲಿ ದೇವತೆಯ ಆವಾಹನೆ, ಸ್ಥಾಪನೆ ಮತ್ತು ಪ್ರತ್ಯಕ್ಷ ಪೂಜಾವಿಧಿ, ಈ ವಿಷಯಗಳಿರುತ್ತವೆ. ದೇವತೆಗೆ ಉಪಚಾರಗಳನ್ನು ಸಮರ್ಪಿಸುವಾಗ ಮಾಡಬೇಕಾದ ಕೃತಿ ಮತ್ತು ಪಠಿಸುವ ಮಂತ್ರಗಳ ಅರ್ಥವು ಪೂಜಕನಿಗೆ ತಿಳಿದರೆ, ಅವನಿಂದ ಪೂಜಾಕರ್ಮವು ಅಧಿಕ ಭಾವಪೂರ್ಣವಾಗಿ ಆಗುತ್ತದೆ. ಇದರಿಂದ ಮೂರ್ತಿಯಲ್ಲಿ ದೇವತೆಯು ತತ್ತ್ವವು ಅಧಿಕ ಪ್ರಮಾಣದಲ್ಲಿ ಆಕರ್ಷಿಸಲ್ಪಟ್ಟು ಪೂಜಕರಿಗೆ (ಪೂಜೆ ಮಾಡುವವನು ಮತ್ತು ಅವನ ಕುಟುಂಬಿಯರಿಗೆ) ಅದರ ಲಾಭವಾಗುತ್ತದೆ, ಅಂದರೆ ಪೂಜಕನ ಮೇಲೆ ಆ ದೇವತೆಯ ಕೃಪೆಯಾಗುತ್ತದೆ. ಇದೇ ಉದ್ದೇಶದಿಂದ ಶ್ರೀ ಗಣೇಶಚತುರ್ಥಿಯ ಸಮಯದಲ್ಲಿನ ಪೂಜೆ, ಪೂಜೆಯಲ್ಲಿನ ವಿಧಿಗಳು ಮತ್ತು ಕೆಲವು ಮಂತ್ರಗಳನ್ನು ಅರ್ಥಸಹಿತ ಈ ಕಿರುಗ್ರಂಥದಲ್ಲಿ ನೀಡಲಾಗಿದೆ.

ಪೂಜೆಯಲ್ಲಿನ ಮಂತ್ರಗಳಲ್ಲಿ, ವೇದೋಕ್ತ ಮತ್ತು ಪುರಾಣೋಕ್ತ ಎಂಬ ಎರಡು ವಿಧಗಳಿರುತ್ತವೆ. ಸ್ವರಯುಕ್ತ ವೇದೋಕ್ತ ಮಂತ್ರಗಳನ್ನು ಉಚ್ಚರಿಸಲು ಅವುಗಳನ್ನು ವಿಧಿವತ್ತಾಗಿ ಅಧ್ಯಯನ ಮಾಡುವುದು ಆವಶ್ಯಕವಾಗಿದೆ. ಇತ್ತೀಚೆಗೆ ಬಹುತೇಕ ಭಾವಿಕರಿಗೆ ಹೀಗೆ ಅಧ್ಯಯನ ಮಾಡುವುದು ವಿವಿಧ ಕಾರಣಗಳಿಂದ ಸಾಧ್ಯವಿರುವುದಿಲ್ಲ. ತದ್ವಿರುದ್ಧವಾಗಿ

ಪುರಾಣೋಕ್ತ ಮಂತ್ರಗಳು ಪಠಿಸಲು ಸುಲಭವಾಗಿದ್ದು, ಈ ಮಂತ್ರಗಳಿಗೆ ವೇದೋಕ್ತ ಮಂತ್ರಗಳಂತೆ ಕಠಿಣ ನಿಯಮಗಳಿಲ್ಲ. ಆದುದರಿಂದ ಈ ಕಿರುಗ್ರಂಥದಲ್ಲಿ ನಾವು ಪುರಾಣೋಕ್ತ ಮಂತ್ರಗಳನ್ನು ಕೊಟ್ಟಿದ್ದೇವೆ. ವೇದೋಕ್ತ ಮಂತ್ರಗಳು ತಿಳಿಯದವರು ಪುರಾಣೋಕ್ತ ಮಂತ್ರಗಳಿಂದ ಪೂಜೆಯನ್ನು ಮಾಡುವುದರಿಂದ, ವೇದಮಂತ್ರಗಳನ್ನು ಅಯೋಗ್ಯ ರೀತಿಯಲ್ಲಿ ಉಚ್ಚರಿಸುವುದರಿಂದಾಗುವ ಹಾನಿಯನ್ನು ತಪ್ಪಿಸಬಹುದು. ವೇದೋಕ್ತ ಮಂತ್ರಗಳು ತಿಳಿಯಲು ಕೆಲವು ಕಡೆಗಳಲ್ಲಿ ಅವುಗಳನ್ನು ಉಲ್ಲೇಖಿಸಿ, ಅವುಗಳ ಕೆಳಗೆ ಹಾಗೆ ಟಿಪ್ಪಣಿಯನ್ನೂ ಕೊಡಲಾಗಿದೆ.

ಪೂಜೆಯಲ್ಲಿ ‘ಭಾವವಿದ್ದಲ್ಲಿ ದೇವರು’ ಈ ತತ್ತ್ವವು ಮಹತ್ವದ್ದಾಗಿದೆ. ದೇವತೆಯ ಪೂಜೆ ಮಾಡುವಾಗ ಅಂತಃಕರಣದಲ್ಲಿ ಭಾವವಿಲ್ಲದಿದ್ದಲ್ಲಿ, ಪೂಜೆಯಿಂದ ಅಷ್ಟೊಂದು ಲಾಭವಾಗುವುದಿಲ್ಲ. ಆದುದರಿಂದ ಶ್ರೀ ಗಣೇಶನ ಪೂಜೆ ಮಾಡುವಾಗ ‘ಪ್ರತ್ಯಕ್ಷ ಶ್ರೀ ಗಣೇಶನು ಪೂಜಾಸ್ಥಳದಲ್ಲಿ ಬಂದಿದ್ದಾನೆ’ ಎಂಬ ಭಾವದಿಂದಲೇ ಎಲ್ಲ ಉಪಚಾರಗಳನ್ನು ಮಾಡಬೇಕು.

ಕಿರುಗ್ರಂಥದಲ್ಲಿ ನೀಡಿದಂತೆ ಶಾಸ್ತ್ರೋಕ್ತ ಪದ್ಧತಿಯಿಂದ ಶ್ರೀ ಗಣೇಶನ ಪೂಜೆ ಮಾಡಿ ಪೂಜಕನಿಗೆ ಗಣೇಶತತ್ತ್ವದ ಹೆಚ್ಚೆಚ್ಚು ಲಾಭವಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. - ಸಂಕಲನಕಾರರು

# ಶ್ರೀ ಗಣೇಶ ಪೂಜಾವಿಧಿ

## (ಕೆಲವು ಮಂತ್ರಗಳ ಅರ್ಥಸಹಿತ)

## ಅನುಕ್ರಮಣಿಕೆ


卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ಪ್ರಸ್ತಾವನೆ! ೭

卐 ಮನೋಗತ ೯

---

೧. 'ಪೂಜೆ' ಶಬ್ದದ ನಿಜವಾದ ಅರ್ಥ ೧೧

೨. ಪೂಜೆಯ ಸಿದ್ಧತೆ ೧೧

೨ ಅ. ಪೂಜೆಯ ಸಿದ್ಧತೆ ಮಾಡುವಾಗ ಸ್ತೋತ್ರಪಠಣ ಅಥವಾ ನಾಮಜಪ ಹೇಗೆ ಮಾಡಬೇಕು ? ೧೧

೨ ಆ. ಪೂಜಾಸಾಹಿತ್ಯದ ಪಟ್ಟಿ ೧೧

೨ ಇ. ಪೂಜಾಸ್ಥಳದ ಶುದ್ಧೀಕರಣ ಮತ್ತು ಉಪಕರಣಗಳಲ್ಲಿನ ದೇವತ್ವವನ್ನು ಜಾಗೃತಗೊಳಿಸುವುದು ೧೩

೨ ಈ. ರಂಗೋಲಿ ಬಿಡಿಸುವುದು ೧೪

೨ ಉ. ಶಂಖನಾದ ಮಾಡುವುದು (ಶಂಖವನ್ನು ಊದುವುದು) ೧೫

೨ ಊ. ದೇವರಪೂಜೆಗೆ ಕುಳಿತುಕೊಳ್ಳಲು ಮಣೆ ತೆಗೆದುಕೊಳ್ಳುವುದು ೧೫

**೩. ಪೂಜೆಯ ಸಂದರ್ಭದಲ್ಲಿ ಕೆಲವು ಸೂಚನೆಗಳು ೧೬**

**೪. ಪ್ರತ್ಯಕ್ಷ ಪೂಜಾವಿಧಿ ೧೮**

೪ ಅ. ಪೂಜೆಯ ಆರಂಭದಲ್ಲಿ ಮಾಡಬೇಕಾದ ಪ್ರಾರ್ಥನೆ ೧೮

೪ ಆ. ಕುಂಕುಮತಿಲಕ ಹಚ್ಚುವುದು ೧೮

೪ ಇ. ಆಚಮನ ಮಾಡುವುದು ೧೮

೪ ಈ. ದೇವತಾಸ್ಮರಣ ೨೦

೪ ಉ. 'ದೇಶಕಾಲ' ಮತ್ತು 'ಸಂಕಲ್ಪ' ೨೬

೪ ಊ. ಶ್ರೀ ಮಹಾಗಣಪತಿಪೂಜೆ ೩೦

೪ ಎ. ಶ್ರೀವಿಷ್ಣುಸ್ಮರಣೆ ೩೫

೪ ಏ. ಪೂಜೆಗೆ ಸಂಬಂಧಿಸಿದ ಉಪಕರಣಗಳ ಪೂಜೆ ೩೫

೪ ಐ. ಪೂಜಾಸಾಹಿತ್ಯ ಮತ್ತು ಪೂಜಾಸ್ಥಳ ಇವುಗಳ, ಹಾಗೆಯೇ ಸ್ವಂತದ (ಪೂಜಕನ) ಶುದ್ಧಿ ೩೮

೪ ಒ. ಸಿದ್ಧಿವಿನಾಯಕನ ಮಣ್ಣಿನ ಮೂರ್ತಿಯ ಪೂಜೆ ೩೯

೪ ಓ. ಸಿದ್ಧಿವಿನಾಯಕನ ಮಣ್ಣಿನ ಮೂರ್ತಿಯ ಉತ್ತರಪೂಜೆ ೬೮